

بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 01-03-2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಬದರಿ ಸಹಾಬರಿಗೆ ಸಂಬಂಧಿಸಿದ ಘಟನೆಗಳ ಬಗ್ಗೆ ವಿವರಣೆ ಮುಂದುವರಿಯುತ್ತಿದೆ. ಈ ದಿನ ಸಹ ನಾನು ಕೆಲವು ಸಹಾಬರ ಕುರಿತು ವಿವರಿಸುವೆನು. ಮೊದಲನೆಯ ಸಹಾಬಿ ಹಝ್ರತ್ ಖಾಲಿ ಬಿನ್ ಅಬೀ ಖಾಲಿ(ರ). ಅವರು ಬದರ್, ಉಹುದ್ ಸಮೇತ ಎಲ್ಲ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದರು. ಅವರು ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರವರ ಖಿಲಾಫತ್ ಕಾಲದಲ್ಲಿ ನಿಧನ ಹೊಂದಿದರು.

ನಾನು ವಿವರಿಸಲಿರುವ ಎರಡನೆಯ ಸಹಾಬಿ ಹಝ್ರತ್ ರಾಫಿಅ್ ಬಿನ್ ಮುಅಲ್ಲಾ(ರ). ಅವರು ಖಝ್ರಜ್ ಗೋತ್ರದ ಶಾಖೆಯಾದ ಬನೂ ಹಬೀಬ್‌ಗೆ ಸೇರಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ರಾಫಿಅ್ ಮತ್ತು ಹಝ್ರತ್ ಸಫ್‌ವಾನ್ ಬಿನ್ ಬೈಝಾರ ಮಧ್ಯೆ ಸಹೋದರ ಸಂಬಂಧವನ್ನು ಸ್ಥಾಪಿಸಿದ್ದರು. ಈ ಇಬ್ಬರು ಸಹಾಬರೂ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಕೆಲವು ವರದಿ ಪ್ರಕಾರ ಈ ಇಬ್ಬರು ಸಹಾಬರು ಬದರ್ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಝುಶ್ಶಿಮಾಲೀನ್ ಹಮೀರ್ ಬಿನ್ ಅಬ್ದು ಅಮರ್(ರ). ಅವರ ಮೂಲ ಹೆಸರು ಉಮೈರ್ ಮತ್ತು ಉಪನಾಮ ಅಬೂ ಮುಹಮ್ಮದ್ ಎಂದಾಗಿತ್ತು. ಅವರು ಮಕ್ಕದಿಂದ ಹಿಜ್‌ರತ್ ಮಾಡಿ ಮದೀನಕ್ಕೆ ಬಂದಾಗ ಹಝ್ರತ್ ಸಅದ್ ಬಿನ್ ಖೈಸಮ್‌ರವರ ಮನೆಯಲ್ಲಿ ವಾಸಿಸಿದರು. ಹಝ್ರತ್ ಯಝೀದ್ ಬಿನ್ ಹಾರಿಸ್‌ರೊಂದಿಗೆ ಅವರ ಸಹೋದರ ಸಂಬಂಧವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಥಾಪಿಸಿದರು. ಈ ಇಬ್ಬರು ಸಹಾಬರು ಬದರ್ ಯುದ್ಧದಲ್ಲಿ ಶಹೀದರಾದರು. ಶಹಾದತ್ ಸಮಯ ಅವರ ಪ್ರಾಯ 30 ಆಗಿತ್ತು.

ಇನ್ನೊಬ್ಬ ಸಹಾಬಿ ಹಝ್ರತ್ ರಾಫಿಅ್ ಬಿನ್ ಯಝೀದ್(ರ). ಅವರು ಅನ್‌ಸಾರ್‌ಗಳ ಔಸ್ ಗೋತ್ರದ ಬನೂ ಝಹೂರ್ ಬಿನ್ ಅಬ್ದುಲ್ ಅಶ್‌ಹಲ್ ಶಾಖೆಗೆ ಸೇರಿದ್ದರು. ಅವರ ತಾಯಿ ಅಖ್‌ರಬ್ ಬಿನ್ತ್ ಮುಆಝ್‌ರವರು ಪ್ರಸಿದ್ಧ ಸಹಾಬಿ ಹಝ್ರತ್ ಸಅದ್ ಬಿನ್ ಮುಆಝ್‌ರ ಸಹೋದರಿಯಾಗಿದ್ದರು. ಹಝ್ರತ್ ರಾಫಿಅ್‌ರವರಿಗೆ ಉಸೈದ್ ಮತ್ತು ಅಬ್ದುರ್ರಹ್ಮಾನ್ ಎಂಬ ಇಬ್ಬರು ಪುತ್ರರಿದ್ದರು. ಹಝ್ರತ್ ರಾಫಿಅ್ ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಝಕ್ವಾನ್ ಬಿನ್ ಅಬ್ದುಖೈಸ್(ರ). ಅವರು ಅನ್‌ಸಾರ್‌ಗಳ ಖಝ್ರಜ್ ಗೋತ್ರದ ಬನೂ ಝುರೀಕ್ ಶಾಖೆಗೆ ಸೇರಿದ್ದರು. ಅವರು ಬೈಅತೆ ಅಖಬ ಊಲಾ ಮತ್ತು ಸಾನಿಯದಲ್ಲಿ ಸಹ ಭಾಗವಹಿಸಿದ್ದರು. ಅವರ ಬಗ್ಗೆ ಗಮನಾರ್ಹವಾದ ಒಂದು ವಿಷಯವೇನೆಂದರೆ ಅವರು ಮದೀನದಿಂದ ಹಿಜ್‌ರತ್ ಮಾಡಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ಮಕ್ಕಕ್ಕೆ ಹೋದರು. ಅವರನ್ನು ಅನ್‌ಸಾರಿ ಮುಹಾಜಿರ್ ಎಂದು ಕರೆಯುತ್ತಿದ್ದರು. ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಉಹುದ್ ಯುದ್ಧದಲ್ಲಿ ಅವರು ಶಹೀದರಾದರು.

ಸುಹೈಲ್ ಬಿನ್ ಅಬೀ ಸಾಲಿಹ್ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಉಹುದ್ ಯುದ್ಧಕ್ಕೋಸ್ಕರ ಹೊರಟಾಗ ಒಂದು ಸ್ಥಳದ ಕಡೆಗೆ ಸೂಚಿಸಿ ಹೇಳಿದರು: ಆ ಕಡೆಗೆ ಯಾರು ಹೋಗುವವರು ಎಂದು. ಬನೀ ಝುರೀಕ್‌ರ ಒಬ್ಬ ಸಹಾಬಿ ಹಝ್ರತ್ ಝಕ್‌ವಾನ್ ಬಿನ್ ಅಬ್ದುಖೈಸ್ ಎದ್ದು ನಿಂತು ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ನಾನು ಹೋಗುವೆನು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು: ನೀವು ಯಾರು ಎಂದು. ಹಝ್ರತ್ ಝಕ್‌ವಾನ್ ಹೇಳಿದರು: ನಾನು ಝಕ್‌ವಾನ್ ಬಿನ್ ಅಬ್ದುಖೈಸ್. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕುಳಿತುಕೊಳ್ಳಲು ಹೇಳಿದರು. ಅವರು ಮೂರು ಸಾರಿ ಆ ಮಾತು ಹೇಳಿದರು. ಅನಂತರ ಹೇಳಿದರು: ಇಂತಿಂತಹ ಸ್ಥಳಗಳಿಗೆ ಹೋಗಿರಿ. ಆಗ ಹಝ್ರತ್ ಝಕ್‌ವಾನ್ ಬಿನ್ ಅಬ್ದುಖೈಸ್ ಹೇಳಿದರು: ಓ ಅಲ್ಲಾಹನ ಸಂದೇಶವಾಹಕರೇ ಖಂಡಿತವಾಗಿಯೂ ನಾನೇ ಅಲ್ಲಿಗೆ ಹೋಗುವೆನು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನಾಳೆ ಸ್ವರ್ಗದ ಹಚ್ಚಹಸುರಾದ ಸ್ಥಳದಲ್ಲಿ ನಡೆಯುತ್ತಾ ಇರುವವನನ್ನು ನೋಡಲು ಯಾರಾದರೂ ಬಯಸುವುದಾದರೆ ಈ ವ್ಯಕ್ತಿಯನ್ನು ನೋಡಲಿ. ಅನಂತರ ಹಝ್ರತ್ ಝಕ್ವಾನ್ ತನ್ನ ಮನೆಯಲ್ಲಿರುವವರಿಗೆ ವಿದಾಯ ಹೇಳಲು ಹೋದರು. ಅವರ ಪತ್ನಿ ಮತ್ತು ಪುತ್ರಿಯರು ಅವರೊಂದಿಗೆ ಹೇಳಿದರು: ತಾವು ನಮ್ಮನ್ನು ಬಿಟ್ಟು ಹೋಗುತ್ತಿರುವಿರಿ ಎಂದು. ಹಝ್ರತ್ ಝಕ್ವಾನ್ ಅವರನ್ನು ಬಿಟ್ಟು ಸ್ವಲ್ಪ ದೂರಹೋಗಿ ಅವರ ಕಡೆಗೆ ನೋಡುತ್ತಾ ಹೇಳಿದರು: ಇನ್ನು ಖಿಯಾಮತ್ ದಿನದಂದೇ

ನಮ್ಮ ಭೇಟಿ ಆಗುವುದು. ಅನಂತರ ಅವರು ಉಹುದ್ ಯುದ್ಧದಲ್ಲಿ ಶಹೀದರಾದರು.

ಇನ್ನೊಬ್ಬ ಸಹಾಬಿ ಹಝ್ರತ್ ಖುವಾದ್ ಬಿನ್ ಜುಬೈರ್ ಅನ್ಸಾರಿ(ರ). ಅವರು ಹಝ್ರತ್ ಅಬ್ದುಲ್ಲಾ ಬಿನ್ ಜುಬೈರರ ಸಹೋದರರಾಗಿದ್ದರು. ಹಝ್ರತ್ ಅಬ್ದುಲ್ಲಾ ಬಿನ್ ಜುಬೈದ್‌ರನ್ನು ಉಹುದ್ ಯುದ್ಧದಲ್ಲಿ ಪರ್ವತದ ತಗ್ಗು ಪ್ರದೇಶದ ಸಂರಕ್ಷಣೆಗೆ ಐವತ್ತು ಬಿಲ್ಲುಗಾರರ ಜೊತೆಗೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೇಮಿಸಿದ್ದರು. ಹಝ್ರತ್ ಖುವಾದ್ ಮಧ್ಯಮ ಎತ್ತರದವರಾಗಿದ್ದರು. ಅವರು ಹಿಜರಿ ವರ್ಷ 40ರಲ್ಲಿ 74ನೇ ವಯಸ್ಸಿನಲ್ಲಿ ಮದೀನದಲ್ಲಿ ನಿಧನ ಹೊಂದಿದರು. ಹಝ್ರತ್ ಖುವಾದ್ ಸಹ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆಗೆ ಬದರ್ ಯುದ್ಧಕ್ಕೆ ಹೊರಟಿದ್ದರು. ಆದರೆ ಮಾರ್ಗಮಧ್ಯೆ ಒಂದು ಮೊಣಚು ಕಲ್ಲು ತಗಲಿದ ಕಾರಣ ಗಾಯಗೊಂಡರು. ಆದುದರಿಂದ ಅವರನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನಕ್ಕೆ ಮರಳುವಂತೆ ಮಾಡಿದರು. ಆದರೆ ಅವರಿಗೆ ಯುದ್ಧದಲ್ಲಿ ಲಭಿಸಿದ ಸಂಪತ್ತಿನಲ್ಲಿ ಪಾಲು ನೀಡಿದರು. ಆದುದರಿಂದ ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದವರಾಗಿ ಗಣಿಸಲ್ಪಟ್ಟರು. ಅವರು ಉಹುದ್, ಖಂದಕ್ ಮತ್ತು ಇತರ ಎಲ್ಲ ಯುದ್ಧಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಭಾಗವಹಿಸಿದರು. ಹಝ್ರತ್ ಖುವಾದ್ ವರದಿ ಮಾಡುತ್ತಾರೆ: ಒಮ್ಮೆ ನಾನು ರೋಗಿಯಾಗಿದ್ದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನನ್ನನ್ನು ಸಂದರ್ಶಿಸಲು ಆಗಮಿಸಿದರು. ನನ್ನ ರೋಗ ಉಪಶಮನವಾದಾಗ ಅವರು ಹೇಳಿದರು: ಎಲೈ ಖುವಾದ್, ಈಗ ನೀನು ಆರೋಗ್ಯವಂತನಾಗಿರುವೆ. ನೀನು ಅಲ್ಲಾಹನೊಂದಿಗೆ ಮಾಡಿದ ವಾಗ್ದಾನ ನೆರವೇರಿಸು. ನಾನು ಹೇಳಿದೆ: ನಾನು ಅಲ್ಲಾಹನೊಂದಿಗೆ ಯಾವ ವಾಗ್ದಾನ ಸಹ ಮಾಡಿಲ್ಲ. ಆಗ ಅವರು ಹೇಳಿದರು: ಒಬ್ಬನು ರೋಗಿಯಾಗಿದ್ದಾಗ ಯಾವುದಾದರೂ ಹರಕೆ ಹೇಳದೆ ಇರುವುದಿಲ್ಲ. ನನಗೆ ರೋಗೋಪಶಮನವಾದರೆ ನಾನು ಹಾಗೆ ಮಾಡುವೆನು ಹೀಗೆ ಮಾಡುವೆನು ಎಂದು ಸಂಕಲ್ಪ ಮಾಡುತ್ತಾನೆ. ಆದುದರಿಂದ ಅಲ್ಲಾಹನೊಂದಿಗೆ ಮಾಡಿದ ವಾಗ್ದಾನವನ್ನು ಈಡೇರಿಸಬೇಕು. ನೀನು ಏನಾದರೂ ಹೇಳಿದ್ದರೆ ಅದನ್ನು ಈಡೇರಿಸು. (ಹುಝೂರ್ ಹೇಳಿದರು:) ಇದು ನಾವೆಲ್ಲರೂ ಗಮನಿಸಬೇಕಾದ ಮತ್ತು ಚಿಂತಿಸಬೇಕಾದ ವಿಷಯವಾಗಿದೆ.

ಖಂದಕ್ ಯುದ್ಧದ ಸಂದರ್ಭದಲ್ಲಿ ಬನೂ ಖುರೈಝು ಗೋತ್ರದವರು ಪ್ರತಿಜ್ಞೆ ಉಲ್ಲಂಘಿಸಿದ ಬಗ್ಗೆ ಸಮಾಚಾರ ದೊರಕಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಪ್ರತಿನಿಧಿ ಸಂಘವನ್ನು ಅವರ ಬಳಿಗೆ ಕಳುಹಿಸಿದರು. ಅವರಲ್ಲಿ ಹಝ್ರತ್ ಖುವಾದ್ ಸಹ ಸೇರಿದ್ದರು. ಒಂದು ವರದಿ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಖುವಾದ್‌ರನ್ನು ತನ್ನ ಕುದುರೆಯ ಮೇಲೆ ಸವಾರಿ ಮಾಡಿಸಿ ಬನೂ ಖುರೈಝುರ ಕಡೆಗೆ ಕಳುಹಿಸಿದ್ದರು. ಆ ಕುದುರೆಯ ಹೆಸರು ಜುನಾಹ್ ಎಂದಾಗಿತ್ತು.

ಇನ್ನೊಬ್ಬ ಸಹಾಬಿ ಹಝ್ರತ್ ರಬೀಅ ಬಿನ್ ಅಖ್ಸಮ್(ರ). ಅವರ ಉಪನಾಮ ಅಬೂ ಯಝೀದ್. ಅವರು ಗಿಡ್ಡ ಗಾತ್ರದವರೂ ದಪ್ಪ ಶರೀರದವರೂ ಆಗಿದ್ದರು. ಅವರು ಮುಹಾಜಿರ್ ಆಗಿದ್ದರು. ಬದರ್ ಯುದ್ಧದ ಸಮಯ ಅವರ ಪ್ರಾಯ 30 ಆಗಿತ್ತು. ಅವರು ಉಹುದ್, ಖಂದಕ್ ಯುದ್ಧಗಳಲ್ಲೂ ಹುದೈಬಿಯಾ ಸಂಧಿ, ಖೈಬರ್ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಖೈಬರ್ ಯುದ್ಧದಲ್ಲಿ ಶಹೀದರಾದರು. ಅವರು ಶಹೀದರಾಗುವಾಗ ಅವರ ಪ್ರಾಯ 37 ಆಗಿತ್ತು. ಇನ್ನೊಬ್ಬ ಸಹಾಬಿ ಹಝ್ರತ್ ರಿಫಾಅ್ ಬಿನ್ ಅಮರುಲ್ ಜಹ್ನಿ(ರ). ಅವರು ಬದರ್ ಮತ್ತು ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಅನ್ಸಾರ್‌ಗಳ ಬನೂ ನಜ್ಜಾರ್ ಗೋತ್ರದವರೊಂದಿಗೆ ಪ್ರತಿಜ್ಞಾಬದ್ಧರಾಗಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಝೈದ್ ಬಿನ್ ವದೀಅ(ರ). ಅವರು ಅನ್ಸಾರ್‌ಗಳ ಖಝ್ರಜ್ ಗೋತ್ರಕ್ಕೆ ಸೇರಿದವರಾಗಿದ್ದರು. ಅವರು ಬೈಅತೆ ಅಖಬದಲ್ಲಿ ಮತ್ತು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಅವರು ಉಹುದ್ ಯುದ್ಧದಲ್ಲಿ ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ರಬೀಅ ಬಿನ್ ರಾಫಿಅ್ ಅನ್ಸಾರಿ(ರ). ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಝೈದ್ ಬಿನ್ ಮುಝುಯ್ಯಿನ್(ರ). ಅವರು ಖಝ್ರಜ್ ಗೋತ್ರದವರಾಗಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಹಝ್ರತ್ ಝೈದ್ ಮತ್ತು ಹಝ್ರತ್ ಮುಸ್ತಹ್ ಬಿನ್ ಅಸಾಸರ ಮಧ್ಯೆ ಸಹೋದರ ಸಂಬಂಧವನ್ನು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ಥಾಪಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಅಯಾಝ್ ಬಿನ್ ಝುಹೀರ್(ರ). ಅವರು ಅಬಿಸೀನಿಯಾ ದೇಶಕ್ಕೆ ಎರಡನೆಯ ಸಾರಿ ಹಿಜ್ರತ್ ಮಾಡಿದವರಲ್ಲಿ ಸೇರಿದ್ದರು. ಅಲ್ಲಿಂದ ಮರಳಿ ಬಂದು ಮದೀನಕ್ಕೆ ಹಿಜ್ರತ್ ಮಾಡಿದರು. ಅವರು ಹಝ್ರತ್ ಕುಲ್ಸೂಮ್ ಬಿನ್ ಅಲ್ ಹದಮ್‌ರ ಮನೆಯಲ್ಲಿ ವಾಸಿಸಿದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದರು. ಹಿಜರಿ 30ರಲ್ಲಿ ಹಝ್ರತ್ ಉಸ್ಮಾನ್‌ರ(ರ) ಖಿಲಾಫತ್ ಕಾಲದಲ್ಲಿ ಅವರು ನಿಧನ ಹೊಂದಿದರು.

ಇನ್ನೊಬ್ಬ ಸಹಾಬಿ ಹಝ್ರತ್ ರಿಫಾಅ್ ಬಿನ್ ಅಮರ್ ಅನ್ಸಾರಿ(ರ). ಅವರು 70 ಅನ್ಸಾರ್‌ಗಳ ಜೊತೆ ಬೈಅತ್ ಅಖಬ ಸಾನಿಯದಲ್ಲಿ ಭಾಗವಹಿಸಿದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಅವರು ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಝಿಯಾದ್ ಬಿನ್ ಅಮ್ರ್(ರ).

ಅವರು ಅನ್ಸಾರ್‌ಗಳೊಂದಿಗೆ ಪ್ರತಿಜ್ಞಾಬದ್ಧರಾಗಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದರು. ಅವರು ಬನೂ ಸಾಯಿದ ಬಿನ್ ಕಅಬ್ ಗೋತ್ರದವರಾಗಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಸಾಲಿಮ್ ಬಿನ್ ಉಮೈರ್ ಬಿನ್ ಸಾಬಿತ್(ರ). ಅವರು ಅನ್ಸಾರ್‌ಗಳ ಬನೂ ಅಮರ್ ಬಿನ್ ಔಫ್ ಗೋತ್ರದವರಾಗಿದ್ದರು. ಅವರು ಬೈಅತ್ ಉಝ್ವ ಹಾಗೂ ಬದರ್, ಉಹುದ್, ಖಂದಕ್ ಸಮೇತ ಎಲ್ಲ ಯುದ್ಧಗಳಲ್ಲಿಯೂ ಭಾಗವಹಿಸಿದ್ದರು. ತಬೂಕ್ ಯುದ್ಧಕ್ಕೆ ಹೋಗಲು ಸವಾರಿ ಮೃಗಗಳು ದೊರಕದ ಏಳು ಜನ ಸಹಾಬರಲ್ಲಿ ಅವರು ಒಬ್ಬರಾಗಿದ್ದರು. ಅವರು ಸವಾರಿ ಮೃಗವನ್ನು ಆವಶ್ಯಪಟ್ಟಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು, ನನ್ನ ಬಳಿ ಸವಾರಿಗೆ ಏನೂ ಇಲ್ಲ. ಆ ಜನರು ಮರಳಿ ಹೋದರು. ಆಗ ಅವರು ಅಶ್ರುಭರಿತರಾಗಿದ್ದರು. ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಪವಿತ್ರ ಖುರ್‌ಆನ್ ವಚನ, وَلَا عَلَى الَّذِينَ إِذَا مَا أَتَوْكَ لِتَحْمِلَهُمْ قُلْتَ لَا أَجِدُ مَا أَحْمِلُكُمْ عَلَيْهِ تَوَلَّوا وَّأَعْيُنُهُمْ تَفِيضُ مِنَ الدَّمْعِ حَزَنًا أَلَّا يَجِدُوا مَا يُنفِقُونَ **ವಲಾ ಅಲಲ್ಲಝೀನ ಇಝಾ ಮಾ ಅತವ್‌ಕ ಲಿತಹ್‌ಮಿಲಹುಮ್ ಖುಲ್‌ತ ಲಾ ಅಜಿದು ಮಾ ಅಹ್‌ಮಿಲುಕುಮ್ ಅಲೈಹಿ. ತವಲ್ಲವ್ ವ ಅಅ್‌ಯುನುಹುಮ್ ತಫೀಝು ಮಿನದ್ದಮ್‌ಇ ಹಝನನ್ ಅಲ್ಲಾ ಯಜಿದೂ ಮಾ ಯುನ್‌ಫಿಖೂನ್.** (ಯುದ್ಧಕ್ಕೆ ಹೋಗಲು) ತಮಗೆ ಸವಾರಿ ಒದಗಿಸಬೇಕೆಂದು ನಿನ್ನ ಬಳಿಗೆ ಬಂದು ಕೇಳಿದವರ ಮೇಲೂ ತಪ್ಪೇನಿಲ್ಲ. 'ನಿಮಗೆ ಸವಾರಿ ಒದಗಿಸಲು ನನ್ನ ಬಳಿ ಏನು ಇಲ್ಲ' ಎಂದು ನೀನು ಹೇಳಿದೆ. (ಆಗ) ಖರ್ಚು ಮಾಡಲು ತಮ್ಮ ಬಳಿಯೇನೂ ಇಲ್ಲವೆಂಬ ದುಃಖದಿಂದ ಅವರ ಕಣ್ಣು ಕಣ್ಣೀರಿನಿಂದ ತುಂಬಿದ ಸ್ಥಿತಿಯಲ್ಲಿ ಅವರು ಮರಳಿದರು. (9: 92). ಈ ವಚನದಲ್ಲಿ ಪ್ರಸ್ತಾಪಿಸಿದ ಜನರಲ್ಲಿ ಸಾಲಿಮ್ ಬಿನ್ ಉಮೈರ್ ಮತ್ತು ಸಅಲಬ ಬಿನ್ ಝೈದ್ ಸೇರಿದ್ದರೆಂದು ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡಿದ್ದಾರೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಈ ವಚನದ ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ: ಈ ಏಳು ಮುಸ್ಲಿಮರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಯಿಂದ ಹೋದ ನಂತರ ಹಝ್ರತ್ ಉಸ್ಮಾನ್(ರ) ಮೂರು ಒಂಟೆಗಳನ್ನೂ ಬೇರೆ ಮುಸ್ಲಿಮರು ನಾಲ್ಕು ಒಂಟೆಗಳನ್ನೂ ಕೊಟ್ಟರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಬ್ಬೊಬ್ಬರಿಗೆ ಒಂದೊಂದು ಒಂಟೆಯಂತೆ ಕೊಟ್ಟರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಪವಿತ್ರ ಖುರ್‌ಆನ್‌ನಲ್ಲಿ ಈ ಘಟನೆ ವಿವರಿಸಲು ಕಾರಣವೇನೆಂದರೆ, ಬಡ ಮುಸ್ಲಿಮರ ನಿಷ್ಠೆ ಹೇಗಿತ್ತು ಎಂದು ತೋರಿಸಲಿಕ್ಕೂ ಅವರನ್ನು, ಐಶ್ವರ್ಯವಂತರಾಗಿದ್ದು ಪ್ರಯಾಣ ಮಾಡಲು ಸೌಕರ್ಯಗಳನ್ನು ಹೊಂದಿದ್ದು ಕೂಡ ಸುಳ್ಳು ನೆವನ ಹುಡುಕುತ್ತಿದ್ದವರೊಂದಿಗೆ ಹೋಲಿಸಿ ತೋರಿಸಲಿಕ್ಕಾಗಿಯೂ ಆಗಿದೆ.

ಈ ಏಳು ಜನರ ನಾಯಕ ಹಝ್ರತ್ ಅಬೂ ಮೂಸಾರೊಂದಿಗೆ ಕೇಳಲಾಯಿತು, ನೀವು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಏನನ್ನು ಬೇಡಿದಿರಿ? ಅವರು ಹೇಳಿದರು: ಅಲ್ಲಾಹನಾಣೆ ಒಂಟೆಯನ್ನಾಗಲಿ, ಕುದುರೆಯನ್ನಾಗಲಿ ನಾವು ಬೇಡಿಕೊಂಡಿರಲಿಲ್ಲ. ನಾವು ಹೇಳಿದುದು ಏನೆಂದರೆ, ನಾವು ಬರಿಗಾಲಿನಲ್ಲಿದ್ದೇವೆ. ದೀರ್ಘ ದೂರ ಬರಿಗಾಲಲ್ಲಿ ನಡೆದು ಹೋಗಲಾರೆವು. ನಮಗೆ ಪಾದರಕ್ಷೆಗಳಾದರೂ ದೊರಕಿದರೆ ನಾವು ಅವುಗಳನ್ನು ಕಾಲುಗಳಲ್ಲಿ ಹಾಕಿಕೊಂಡು ಓಡುತ್ತಾ ನಮ್ಮ ಸಹೋದರರನ್ನು ಸೇರಿಕೊಳ್ಳುತ್ತಿದ್ದೆವು ಮತ್ತು ಯುದ್ಧದಲ್ಲಿ ಭಾಗವಹಿಸುತ್ತಿದ್ದೆವು ಎಂದು ಮಾತ್ರ ಹೇಳಿದ್ದೆವು. ಆ ಕಾಲದಲ್ಲಿ ಬಡತನದ ಸ್ಥಿತಿ ಆ ರೀತಿ ಇತ್ತು. ಆದರೂ ಅವರು ಅಂತಹ ಉತ್ಸಾಹಭರಿತರಾಗಿದ್ದರು. ಹಝ್ರತ್ ಸಾಲಿಮ್ ಬಿನ್ ಉಮೈರ್ ಹಝ್ರತ್ ಮುಆವಿಯರವರ ಕಾಲದ ತನಕ ಜೀವಿಸಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಸುರಾಖ ಬಿನ್ ಕಅಬ್(ರ). ಅವರು ಬನೂ ನಜ್ಜಾರ್ ಗೋತ್ರದವರಾಗಿದ್ದರು. ಅವರ ತಾಯಿ ಉಮೈರ ಬಿನ್ತ್ ನುಅ್‌ಮಾನ್. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲ ಯುದ್ಧಗಳಲ್ಲಿ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜೊತೆ ಭಾಗವಹಿಸಿದರು. ಯಮಾಮ ಯುದ್ಧದಲ್ಲಿ ಅವರು ಶಹೀದ್ ಆದರು. ಇನ್ನೊಬ್ಬ ಸಹಾಬಿ ಹಝ್ರತ್ ಸಾಯಿಬ್ ಬಿನ್ ಮಝ್ಊನ್(ರ). ಅವರು ಹಝ್ರತ್ ಉಸ್ಮಾನ್ ಬಿನ್ ಮಝ್ಊನರ ಸಹೋದರರಾಗಿದ್ದರು. ಅವರು ಅಬಿಸೀನಿಯಾ ದೇಶಕ್ಕೆ ಮೊದಲು ಹಿಜ್‌ರತ್ ಮಾಡಿದವರಲ್ಲಿ ಸೇರಿದ್ದರು. ಅವರು ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸೇರಿ ವ್ಯಾಪಾರ ಮಾಡುವ ಭಾಗ್ಯ ಸಹ ಅವರಿಗೆ ಲಭಿಸಿತ್ತು. ಸೀರತ್ ಖಾತಮುನ್ನಬಿಯ್ಯೀನ್ ಗ್ರಂಥದಲ್ಲಿ ಇದರ ಬಗ್ಗೆ ಹೀಗೆ ವಿವರಿಸಲಾಗಿದೆ: ಸಾಯಿಬ್ ಮುಸ್ಲಿಮರಾದಾಗ ಕೆಲವು ಜನರು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಅವರ ಬಗ್ಗೆ ಹೊಗಳಿದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಸಾಯಿಬ್ ಬಗ್ಗೆ ನನಗೆ ನಿಮಗಿಂತ ಹೆಚ್ಚು ತಿಳಿದಿದೆ. ಸಾಯಿಬ್ ಹೇಳಿದರು: ಹೌದು ಅಲ್ಲಾಹನ ಸಂದೇಶವಾಹಕರೇ, ತಾವು ಒಮ್ಮೆ ವ್ಯಾಪಾರದಲ್ಲಿ ನನ್ನ ಸಹಭಾಗಿಯಾಗಿದ್ದಿರಿ. ತಾವು ಯಾವಾಗಲೂ ಅತ್ಯಂತ ಸ್ವಚ್ಛವಾಗಿ ವ್ಯವಹಾರ ಮಾಡುತ್ತಿದ್ದಿರಿ.

ಇನ್ನೊಬ್ಬ ಸಹಾಬಿ ಹಝ್ರತ್ ಆಸಿಮ್ ಬಿನ್ ಖೈಸ್(ರ). ಅವರು ಅನ್ಸಾರ್‌ಗಳ ಸಅಲಬ ಬಿನ್

ಅಮಿರ್ ಗೋತ್ರಕ್ಕೆ ಸೇರಿದವರಾಗಿದ್ದರು. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು. ಇನ್ನೊಬ್ಬ ಸಹಾಬಿ ಹಝ್ರತ್ ತುಫೈಲ್ ಬಿನ್ ಮಾಲಿಕ್ ಬಿನ್ ಖನ್ಸಾ(ರ). ಅವರು ಖಝ್ರಜ್ ಗೋತ್ರದ ಬನೂ ಉಬೈದ್ ಬಿನ್ ಅದೀ ಶಾಖೆಗೆ ಸೇರಿದ್ದರು. ಬೈಅತೆ ಅಖಬ ಹಾಗೂ ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದರು.

ಇನ್ನೊಬ್ಬ ಸಹಾಬಿ ಹಝ್ರತ್ ತುಫೈಲ್ ಬಿನ್ ನುಅ್ಮಾನ್(ರ). ಅವರು ಅನ್ಸಾರ್‌ಗಳ ಖಝ್ರಜ್ ಗೋತ್ರದವರು. ಅವರು ಬೈಅತೆ ಅಖಬ ಹಾಗೂ ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದರು. ಉಹುದ್ ಯುದ್ಧದ ದಿನ ಅವರಿಗೆ ಹದಿಮೂರು ಗಾಯಗಳಾಗಿದ್ದುವು. ಖಂದಕ್ ಯುದ್ಧದಲ್ಲಿ ಅವರು ಶಹೀದರಾದರು. ಇನ್ನೊಬ್ಬ ಸಹಾಬಿ ಹಝ್ರತ್ ಝುಹ್ಹಾಖ್ ಬಿನ್ ಅಬ್ದು ಅಮರ್(ರ). ಅವರು ದೀನಾರ್ ಬಿನ್ ನಜ್ಜಾರ್ ಗೋತ್ರದವರು. ಅವರ ತಂದೆ ಅಬ್ದು ಅಮರ್. ಅವರ ತಾಯಿ ಸುಮೈರ ಬಿನ್ತ್ ಖೈಸ್. ಅವರು ಬದರ್, ಉಹುದ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಉಹುದ್ ಯುದ್ಧದಲ್ಲಿ ಶಹೀದರಾದರು. ಅವರ ಸಹೋದರ ಉತ್‌ಬ ಬಿನ್ ಅಬ್ದು ಅಮರ್‌ರವರು ಬಿಅ್‌ರ್ ಮಊನದ ಘಟನೆಯಲ್ಲಿ ಶಹೀದರಾಗಿದ್ದರು.

ಇನ್ನೊಬ್ಬ ಸಹಾಬಿ ಹಝ್ರತ್ ಝುಹ್ಹಾಖ್ ಬಿನ್ ಹಾರಿಸ(ರ). ಅವರು ಖಝ್ರಜ್ ಗೋತ್ರದವರು. ಅವರ ತಂದೆ ಹಾರಿಸ. ಅವರ ತಾಯಿ ಹಿಂದ್ ಬಿನ್ತ್ ಮಾಲಿಕ್. ಅವರು ಬೈಅತೆ ಅಖಬ ಹಾಗೂ ಬದರ್ ಯುದ್ಧದಲ್ಲಿ ಭಾಗವಹಿಸಿದ್ದರು. ಇನ್ನೊಬ್ಬ ಸಹಾಬಿ ಹಝ್ರತ್ ಖಲ್ಲಾದ್ ಬಿನ್ ಸುವೈದ್ ಅನ್ಸಾರಿ(ರ). ಅವರು ಖಝ್ರಜ್ ಗೋತ್ರದ ಬನೂ ಹಾರಿಸ್ ಶಾಖೆಗೆ ಸೇರಿದ್ದರು. ಅವರು ಬೈಅತೆ ಅಖಬ ಹಾಗೂ ಬದರ್, ಉಹುದ್, ಖಂದಕ್ ಯುದ್ಧಗಳಲ್ಲಿ ಭಾಗವಹಿಸಿದ್ದರು. ಬನೂ ಖುರೈಝ ಯುದ್ಧದಲ್ಲಿ ಒಬ್ಬ ಯಹೂದಿ ಸ್ತ್ರೀ ಅವರ ಮೇಲೆ ಒಂದು ದೊಡ್ಡ ಕಲ್ಲು ಎಸೆದಾಗ ಅವರ ತಲೆ ಒಡೆದು ಅವರು ಶಹೀದರಾದರು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಖಲ್ಲಾದರಿಗೆ ಇಬ್ಬರು ಶಹೀದರಿಗೆ ಸಮಾನವಾದ ಪ್ರತಿಫಲ ಸಿಗುವುದೆಂದು. ಅವರಿಗೆ ಇಮ್ಮಡಿ ಪ್ರತಿಫಲ ಏಕೆಂದು ವಿಚಾರಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಅವರನ್ನು ಅಹ್ಲೆ ಕಿತಾಬಿಗೆ ಸೇರಿದವರು ಶಹೀದ್ ಮಾಡಿದುದರಿಂದ ಇಮ್ಮಡಿ ಪ್ರತಿಫಲ ಸಿಗುವುದು.

ಇನ್ನೊಬ್ಬ ಸಹಾಬಿ ಹಝ್ರತ್ ಔಸ್ ಬಿನ್ ಖೂಲಿ ಅನ್ಸಾರಿ(ರ). ಅವರು ಖಝ್ರಜ್ ಗೋತ್ರದ ಬನೂ ಸಾಲಿಮ್ ಬಿನ್ ಗನಮ್ ಬಿನ್ ಔಫ್ ಶಾಖೆಗೆ ಸೇರಿದ್ದರು. ಅವರು ಬದರ್, ಉಹುದ್, ಖಂದಕ್ ಸಮೇತ ಎಲ್ಲ ಯುದ್ಧಗಳಲ್ಲಿ ಭಾಗವಹಿಸಿದರು. ಅವರು ಅಜ್ಞಾನ ಕಾಲದಲ್ಲಿ ಕಾಮಿಲೀನ್‌ಗಳಲ್ಲಿ ಸೇರಿದ್ದರು. ಅರಬಿ ಓದಲು ಬರೆಯಲು ಕಲಿತವನು, ಈಜಲು ಕಲಿತವನು, ಬಾಣ ಹೂಡಲು ಚೆನ್ನಾಗಿ ಬಲ್ಲವನನ್ನು ಕಾಮಿಲ್ ಎಂದು ಅಜ್ಞಾನ ಕಾಲದಲ್ಲೂ ಇಸ್ಲಾಮಿನ ಆರಂಭದ ಕಾಲದಲ್ಲೂ ಕರೆಯುತ್ತಿದ್ದರು. ಹಝ್ರತ್ ಔಸ್ ಬಿನ್ ಖೂಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮೃತರಾದಾಗ ಅವರಿಗೆ ಸ್ನಾನ ಮಾಡಿಸುವ ಕ್ರಿಯೆಯಲ್ಲೂ ದಫನ್ ಕ್ರಿಯೆಯಲ್ಲೂ ಭಾಗವಹಿಸಿದರು. ಅವರು ನೀರು ತುಂಬಿದ ಗಡಿಗೆಯನ್ನು ಕೈಯಲ್ಲಿ ಎತ್ತಿಕೊಂಡು ತರುತ್ತಿದ್ದರು. ಹಝ್ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರತ್ ಅಲಿ, ಹಝ್ರತ್ ಫಝ್ಲ್ ಬಿನ್ ಅಬ್ಬಾಸ್, ಅವರ ಸಹೋದರ ಖಸಮ್, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ವಿಮೋಚಿಸಿದ ಗುಲಾಮ ಶುಕ್ರಾನ್ ಮತ್ತು ಹಝ್ರತ್ ಔಸ್ ಬಿನ್ ಖೂಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಗೋರಿಯೊಳಗೆ ಇಳಿದು ಮಯ್ಯತನ್ನು ಖಬರಿನೊಳಗಿರಿಸಿದರು.

ಹಝ್ರತ್ ಔಸ್ ಬಿನ್ ಖೂಲಿ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಳಿಗೆ ನಾನು ಹೋದಾಗ ಅವರು ಹೇಳಿದರು: ಓ ಔಸ್, ಯಾರು ಅಲ್ಲಾಹನಿಗೋಸ್ಕರ ವಿನಯವನ್ನು ಮೈಗೂಡಿಸುತ್ತಾನೋ ಅಲ್ಲಾಹನು ಅವನ ಪದವಿಯನ್ನು ಉನ್ನತಗೊಳಿಸುತ್ತಾನೆ. ಯಾರು ದುರಹಂಕಾರದಿಂದ ವರ್ತಿಸುತ್ತಾನೋ ಅಲ್ಲಾಹನು ಅವನನ್ನು ಹೀನಾಯಗೊಳಿಸುತ್ತಾನೆ. ಹಝ್ರತ್ ಔಸ್ ಹಝ್ರತ್ ಉಸ್ಮಾನರ(ರ) ಖಿಲಾಫತ್ ಕಾಲದಲ್ಲಿ ಮದೀನದಲ್ಲಿ ನಿಧನ ಹೊಂದಿದರು.

ಅಲ್ಲಾಹನು ಈ ಎಲ್ಲ ಹಿರಿಯ ಸಹಾಬರ ಪದವಿಗಳನ್ನು ಉನ್ನತಗೊಳಿಸುತ್ತಾ ಇರಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis***(atba)

*At,Masjid Baithul Futhuh London, UK. On 01-03-2019.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim |***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon